# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತುಮಕೂರು ಜಿಲ್ಲೆ,

ನೆಲ ಮಹಡಿ, ಹೊಸ ನ್ಯಾಯಾಲಯಗಳ ಸಂಕೀರ್ಣ, ತುಮಕೂರು

ದೂರವಾಣಿ: 0816-2255133 ಇ-ಮೇಲ್: dlsatumkur1@gmail.com


ಸಂಖ್ಯೆ:ಡಿಎಲ್‌ಎಸ್‌ಎ/ಸಿ.ನೇ/ಆ.ಸ/01/2025/2246/25 ದಿನಾಂಕ:19.09.2025

:: ಅಧಿಸೂಚನೆ ::

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿ ತುಮಕೂರು ರಲ್ಲಿ ಆಡಳಿತ ಸಹಾಯಕ ಹುದ್ದೆಯ ನೇಮಕಾತಿ ಕುರಿತು.

*****

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ: KSLSA:3/ಎಡಿಎಂ/2007/55/ಎಡಿಎಂ/2013, ದಿನಾಂಕ: 09.09.2025 ರ ಅನುಸಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಛೇರಿ ತುಮಕೂರು ರಲ್ಲಿ ಖಾಲಿಯಾಗಲಿರುವ ಈ ಕೆಳಕಂಡ ಆಡಳಿತ ಸಹಾಯಕ (ತಾತ್ಕಾಲಿಕ) ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆ ಹೆಸರು | ಸಂಖ್ಯೆ |
|---|---|---|
| **01** | ಆಡಳಿತ ಸಹಾಯಕ | **01** |

A) ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿ ತುಮಕೂರು ರಲ್ಲಿ ದಿನಾಂಕ: **06.11.2025** ರಿಂದ ಖಾಲಿಯಾಗಲಿರುವ ಆಡಳಿತ ಸಹಾಯಕ (ತಾತ್ಕಾಲಿಕ) ಹುದ್ದೆಯ ನೇಮಕಾತಿ ಪ್ರಕ್ರಿಯೆ ಈ ಕೆಳಗಿನಂತಿರುತ್ತದೆ.

1. ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: **22.09.2025** ರಿಂದ **06.10.2025** ಸಂಜೆ **5.00** ಘಂಟೆ ತನಕ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **0816–2255133** ಮತ್ತು ಇ-ಮೇಲ್ ಪತ್ರ ವ್ಯವಹಾರಕ್ಕಾಗಿ E-mail – dlsatumkur1@gmail.com ಗೆ ಸಂಪರ್ಕಿಸಬಹುದು.

   ಅರ್ಜಿ ಸಲ್ಲಿಸಬೇಕಾದ ವಿಳಾಸ:

   ಸದಸ್ಯ ಕಾರ್ಯದರ್ಶಿಗಳು,
   ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ
   ಆಡಳಿತ ಸಹಾಯಕ ಹುದ್ದೆಯ ನೇಮಕಾತಿ ಸಮಿತಿ,
   ನೆಲ ಮಹಡಿ, ಹೊಸ ನ್ಯಾಯಾಲಯಗಳ ಸಂಕೀರ್ಣ,
   ತುಮಕೂರು ಜಿಲ್ಲೆ, ತುಮಕೂರು.

2. ಅರ್ಜಿಯ ನಮೂನೆಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನೆಲಮಹಡಿ, ಹೊಸ ನ್ಯಾಯಾಲಯಗಳ ಸಂಕೀರ್ಣ, ತುಮಕೂರು ನಲ್ಲಿ ಖುದ್ದಾಗಿ (ರಜೆ ದಿನಗಳನ್ನು ಹೊರತುಪಡಿಸಿ) ಅಥವಾ ತುಮಕೂರು ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್ ರ ಮೂಲಕ ದಿನಾಂಕ: 22.09.2025 ಬೆಳಗ್ಗೆ **10.30** ರಿಂದ ಸಂಜೆ **5.00** ಘಂಟೆ ಸಮಯದಲ್ಲಿ ಪಡೆದುಕೊಳ್ಳಬಹುದಾಗಿದೆ.

3. ಆಡಳಿತ ಸಹಾಯಕ ಹುದ್ದೆಯ ನೇಮಕಾತಿಗೆ ಶೈಕ್ಷಣಿಕ ಅರ್ಹತೆ/ವೇತನ ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ | ಹುದ್ದೆಯ ಹೆಸರು | ಸಂಖ್ಯೆ | ಕನಿಷ್ಠ ವಿದ್ಯಾರ್ಹತೆ | ವೇತನ (ರೂ.) |
|---|---|---|---|---|
| 01 | ಆಡಳಿತ ಸಹಾಯಕ | 01 | • ಯಾವುದೇ ಪದವಿ<br>• ಮೂಲಪದ ಸಂಸ್ಕರಣ ಕೌಶಲ್ಯಗಳು ಮತ್ತು ಕಾರ್ಯ ನಿರ್ವಹಿಸುವ ಸಾಮರ್ಥ್ಯ,<br>• ಕಂಪ್ಯೂಟರ್ ಮತ್ತು ಡೇಟಾವನ್ನು ಫೀಡ್ ಮಾಡುವ ಕೌಶಲ್ಯಗಳು,<br>• ಅರ್ಜಿಯ ಸರಿಯಾದ ಸೆಟ್ಟಿಂಗ್ ನೊಂದಿಗೆ ಉತ್ತಮ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ವೇಗ,<br>• ಡಿಕ್ಟೇಷನ್ ತೆಗೆದುಕೊಳ್ಳುವ ಮತ್ತು ನ್ಯಾಯಾಲಯ ಗಳಲ್ಲಿ ಪ್ರಸ್ತುತಿಗಾಗಿ ಕಡತಗಳನ್ನು ಸಿದ್ಧಪಡಿಸುವ ಸಾಮಾರ್ಥ್ಯ, ಕಡತ ನಿರ್ವಹಣೆ ಪ್ರಕ್ರಿಯೆ ಜ್ಞಾನ. | 18,935/- |

<u>ಷರತ್ತುಗಳು</u>

1. ಹುದ್ದೆಯ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು 06 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾತ್ರ ಸೀಮಿತವಾಗಿರುತ್ತದೆ. ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಅಶಿಸ್ತು, ದುರ್ನಡತೆ, ಆಯ್ಕೆ ಸಮಿತಿ ಗಮನಕ್ಕೆ ಬಂದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು ಹಾಗೂ ಅಭ್ಯರ್ಥಿಯು ಯಾವುದೇ ತರಹದ ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿರುವ ಬಗ್ಗೆ ಆಯ್ಕೆ ಸಮಿತಿಗೆ ಮಾಹಿತಿ ಇದ್ದಲ್ಲಿ ಅಂತಹ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

2. ಶೈಕ್ಷಣಿಕ ಅರ್ಹತೆಯ, ಕಂಪ್ಯೂಟರ್ ಜ್ಞಾನದ ದಾಖಲೆ ಪ್ರತಿಗಳು, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ಅರ್ಜಿಗೆ ಲಗತ್ತಿಸುವುದು. ನೇಮಕಾತಿ ಪ್ರಾಧಿಕಾರ ಕೋರಿದಾಗ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು, ಅಪೂರ್ಣ ಅರ್ಜಿಯನ್ನು ತಿರಸ್ಕರಿಸಲಾಗುವುದು.

3. ಆಡಳಿತ ಸಹಾಯಕ ಹುದ್ದೆಯ ನೇಮಕಾತಿ ಸಂಪೂರ್ಣವಾಗಿ 06 ತಿಂಗಳ ಅವಧಿಗೆ ತಾತ್ಕಾಲಿಕ ಗುತ್ತಿಗೆ ಆಧಾರದ ಹುದ್ದೆಯಾಗಿದ್ದು, ರಾಜ್ಯ ಸರ್ಕಾರವು ನಿಗದಿಪಡಿಸಿರುವ ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ ಮಾಹೆಯಾನ ರೂ.18,935/-ಗಳ ವೇತನವನ್ನು ಹುದ್ದೆಗೆ ನಿಗದಿಪಡಿಸಲಾಗಿರುತ್ತದೆ.

4. ಹುದ್ದೆಯ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಂಪೂರ್ಣವಾಗಿ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತುಮಕೂರು ರವರ ವಿವೇಚನೆಗೆ ಒಳಪಟ್ಟಿರುತ್ತದೆ.

19/9/25

ಸದಸ್ಯ ಕಾರ್ಯದರ್ಶಿಗಳು,
ಹಾಗೂ ಆಡಳಿತ ಸಹಾಯಕ ಹುದ್ದೆಯ ನೇಮಕಾತಿ ಸದಸ್ಯರು
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ತುಮಕೂರು.

ಸದಸ್ಯ ಕಾರ್ಯದರ್ಶಿ
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ತುಮಕೂರು.

ಅಧ್ಯಕ್ಷರು, 19/9
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ
ಆಡಳಿತ ಸಹಾಯಕ ಹುದ್ದೆಯ ನೇಮಕಾತಿ ಸಮಿತಿ
ತುಮಕೂರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ತುಮಕೂರು. 19/9/25